# ವಿಶ್ವದಲ್ಲಿ ಶೇ.75ರಷ್ಟು ಹವಳ ದಿಬ್ಬಗಳು ಅಳಿವಿನಂಚಿನಲ್ಲಿವೆ



## ಕೋರಲ್ ಬ್ಲೀಚಿಂಗ್

ವಿಶ್ವದಾದ್ಯಂತ ಹವಳದ ದಿಬ್ಬಗಳು ಅಳಿವಿನಂಚಿನಲ್ಲಿದ್ದು, ದಿನೇ ದಿನೇ ಬಣ್ಣ ಕಳೆದುಕೊಳ್ಳುತ್ತಿವೆ. ಈ ವಿದ್ಯಮಾನವನ್ನೇ 'ಕೋರಲ್ ಬ್ಲೀಚಿಂಗ್' ಎಂದು ಕರೆಯಲಾಗಿದೆ. ಇದಕ್ಕೆ ಪ್ರಮುಖ ಕಾರಣಗಳು...

- ಸಾಗರಾವಾರದ ಮಾಲಿನ್ಯ
- ಅತಿಯಾದ ಸೂರ್ಯನ ಬೆಳಕು
- ಜಾಗತಿಕ ತಾಪಮಾನ ಏರಿಕೆ
- ಮಾಲಿನ್ಯ, ತಾಪಮಾನ ಏರಿಕೆಯಿಂದಾಗಿ ಒತ್ತಡ ಉಂಟಾದರೆ, ಹವಳ ಹುಳುಗಳ ಬಣ್ಣಕ್ಕೆ ಕಾರಣವಾಗಿರುವ 'ಝೂಸಾಂಥೆಲಿ' ಸೂಕ್ಷ್ಮಕೋಶ, ಹವಳವನ್ನು ಬಿಟ್ಟು ಹೊರ ಹೋಗುತ್ತದೆ. ಹೀಗಾಗಿ ಬಣ್ಣ ಕಳೆದುಕೊಂಡ ಹವಳಗಳು ಸಾಯುತ್ತವೆ.

| ಬ್ಲೀಚಿಂಗ್ ಆಗುತ್ತಿರುವ ಹವಳ ದಿಬ್ಬಗಳ ಶೇಕಡಾವಾರು ಮಾಹಿತಿ | |
|---|---|
| ಆಗ್ನೇಯ ಏಷ್ಯಾ | 94% |
| ಅಟ್ಲಾಂಟಿಕಾ | 75% |
| ಭಾರತ | 66% |
| ಮಧ್ಯಪೂರ್ವ ರಾಷ್ಟ್ರಗಳು | 65% |
| ಪೆಸಿಫಿಕ್ | 48% |
| ಆಸ್ಟ್ರೇಲಿಯಾ | 14% |

**ಮಾಲಿನ್ಯಮಟ್ಟ ನಿಯಂತ್ರಣಗೊಳ್ಳದಿದ್ದರೆ, ಮುಂದಿನ 30 ವರ್ಷಗಳಲ್ಲಿ ಶೇ.30ರಷ್ಟು ಹವಳದ ದಿಬ್ಬಗಳು ಕಣ್ಮರೆಯಾಗಲಿವೆ**

## ವಿಶ್ವದ ಅತಿ ದೊಡ್ಡ ಹವಳ ದಿಬ್ಬಗಳು

- ಗ್ರೇಟ್ ಬ್ಯಾರಿಯರ್ ರೀಫ್ 1553 ಮೈಲಿ
- ರೆಡ್ ಸೀ ರೀಫ್ 1180 ಮೈಲಿ
- ನ್ಯೂ ಕ್ಯಾಲೆಡೋನಿಯಾ ರೀಫ್ 932 ಮೈಲಿ

## ಸನ್‌ಸ್ಕ್ರೀನ್ ಬಳಕೆ

ಬಿಸಿಲಿನಿಂದ ಚರ್ಮವನ್ನು ರಕ್ಷಿಸಿಕೊಳ್ಳಲು ಮನುಷ್ಯರು ಬಳಸುವ ಸನ್‌ಸ್ಕ್ರೀನ್ ಲೋಷನ್‌ಗಳು ಹವಳಗಳಿಗೆ ಮಾರಕವಾಗಿವೆ. ಈ ಲೋಷನ್‌ನಲ್ಲಿರುವ ಆಕ್ಸಿಬೆನ್‌ಝೋನ್‌ನಂಥ ರಾಸಾಯನಿಕ ಹವಳಗಳು ಹೆಚ್ಚು ಶಾಖವನ್ನು ಹೀರಿಕೊಳ್ಳುವಂತೆ ಮಾಡುತ್ತವೆ. ಇದು, ಬ್ಲೀಚಿಂಗ್ ವಿರುದ್ಧ ಹೋರಾಡುವ ಹವಳದ ಸಾಮರ್ಥ್ಯ ತಗ್ಗುವಂತೆ ಮಾಡುತ್ತದೆ.



## ಬಣ್ಣ ಬಣ್ಣದ ದಿಬ್ಬಗಳು

ಹವಳದ ಪಾಲಿಪ್‌ಗಳು ಅರೆ ಪಾರದರ್ಶಕವಾಗಿರುತ್ತವೆ. ಹವಳ ಹುಳುಗಳ ಜೀವಕೋಶದಲ್ಲಿ ವಾಸಿಸುವ ಝೂಸಾಂಥೆಲಿ, ಈ ಹುಳುಗಳಿಗೆ ಪ್ರಮುಖ ಪೋಷಕಾಂಶಗಳ ಮೂಲವಾಗಿದ್ದು, ಆಹಾರ ಮಾತ್ರವಲ್ಲದೇ ಹವಳಕ್ಕೆ ಇದು ಬಣ್ಣವನ್ನೂ ಒದಗಿಸುತ್ತದೆ. ಈ ಬಣ್ಣಗಳು ಥರಾವರಿಯಿದ್ದು, ಹವಳ ದಿಬ್ಬಗಳ ಸೌಂದರ್ಯಕ್ಕೆ ಕಾರಣವಾಗಿವೆ. ಕಂದು, ಹಸಿರು, ಕೆಂಪು, ನೀಲಿ ಅಥವಾ ಹಳದಿ ಬಣ್ಣಗಳು ಹೆಚ್ಚಾಗಿರುತ್ತದೆ.



## ಹವಳ ದಿಬ್ಬಗಳ ವಿಧಗಳು

ಹವಳದಲ್ಲಿ ಪ್ರಮುಖವಾಗಿ ನಾಲ್ಕು ವಿಧಗಳಿವೆ.

**ಫ್ರಿಂಗಿಂಗ್ ರೀಫ್:** ದ್ವೀಪ ಹಾಗೂ ಖಂಡಗಳ ಸಮುದ್ರ ತಟಕ್ಕೆ ಹೊಂದಿಕೊಂಡಂತೆ ನಿರ್ಮಾಣವಾಗುವ ದಿಬ್ಬಗಳನ್ನು 'ಫ್ರಿಂಗಿಂಗ್ ಹವಳ ದಿಬ್ಬ' ಎನ್ನುವರು. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಇವನ್ನು ಕಾಣಬಹುದು.

**ಬ್ಯಾರಿಯರ್ ರೀಫ್:** ಸಮಾನಾಂತರವಾಗಿ ಹಬ್ಬುವ ಹವಳ ದಿಬ್ಬ ಇದಾಗಿದ್ದು, ಸಮುದ್ರದ ವಿಶಾಲ ಪ್ರದೇಶದಲ್ಲಿ ಹರಡಿರುತ್ತದೆ. ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌, ಅತಿ ದೊಡ್ಡ ಬ್ಯಾರಿಯರ್ ರೀಫ್ ಎಂದು ಕರೆಸಿಕೊಂಡಿದೆ.

**ಅಟಾಲ್ ರೀಫ್:** ವೃತ್ತಾಕಾರದ ಹವಳ ದಿಬ್ಬ ಇದಾಗಿದ್ದು, ಸಮುದ್ರದ ಮಧ್ಯಭಾಗದಲ್ಲಿ ಹರಡಿಕೊಂಡಿರುತ್ತದೆ.

**ಪ್ಯಾಚ್ ರೀಫ್:** ಸಣ್ಣ ಹಾಗೂ ಪ್ರತ್ಯೇಕವಾದ ಹವಳ ದಿಬ್ಬ ಇದಾಗಿದೆ.

ಭೂಮಿ ಮೇಲೆ ಅತಿ ನಿಧಾನವಾಗಿ ಬೆಳೆಯುವ ಜೀವಿ 'ಹವಳ'. ಅವುಗಳಿಗೆ ದೊರೆಯುವ ಪೋಷಕಾಂಶ ಹಾಗೂ ಕಡಲ ನೀರಿನ ಗುಣಮಟ್ಟದ ಮೇಲೆ ಹವಳಗಳ ಬೆಳವಣಿಗೆ ಅವಲಂಬಿತವಾಗಿರುತ್ತದೆ.

ಗ್ರೇಟ್ ಬ್ಯಾರಿಯರ್ ರೀಫ್‌ 20,000 ವರ್ಷಗಳಿಂದಲೂ ಇದ್ದು, ವಿಶ್ವದ ಅತಿ ದೊಡ್ಡ ಹವಳದ ದಿಬ್ಬ ಎಂದು ಕರೆಸಿಕೊಂಡಿದೆ. ಇದನ್ನು ಬಾಹ್ಯಾಕಾಶದಿಂದ ಸಹ ಕಾಣಬಹುದಾಗಿದೆ.

